ಉ) *ಹಾಗಿದ್ದಲ್ಲಿ ಈ 1996-97ರ ಆರ್ಥಿಕ ವರ್ಷದಲ್ಲಿ ಪೋಲೀಸ್ ಠಾಣೆ ಹಾಗೂ ವಸತಿ ಗೃಹ ನಿರ್ಮಿಸಲು ಸರ್ಕಾರದವರು ಮಂಜೂರಾತಿ ನೀಡಿ ಹಣ ಒದಗಿಸಿ ಕಟ್ಟಡ ನಿರ್ಮಿಸಲಾಗುವುದೆ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಈ ಪೋಲಿಸ್ ಠಾಣೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

ಉ) ನಿವೇಶನ ಲಭ್ಯವಾದರೆ ಪೋಲೀಸ್ ಠಾಣೆ ಕಟ್ಟಲು ಸರಕಾರದಿಂದ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರದ ಕಛೇರಿಗಳ ಕಂಪ್ಯೂಟರೀಕರಣ ಮಾಡಿದ ಸರ್ಕಾರಿ ಕಛೇರಿಗಳು

255 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪೂರ್ಣ ಕಂಪ್ಯೂಟರೀಕರಣ ಮಾಡಿರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು? (ಪಟ್ಟಿ ನೀಡುವುದು).*

ಆ) *ಸರ್ಕಾರದ ಎಲ್ಲಾ ಇಲಾಖೆಯ ಎಲ್ಲಾ ಕಛೇರಿಗಳನ್ನು ಸಮಗ್ರವಾಗಿ ಕಂಪ್ಯೂಟರೀಕರಣ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆಯೆ? ಎಷ್ಟು ದಿನಗಳಲ್ಲಿ ಪೂರ್ಣ ಕಂಪ್ಯೂಟರೀಕರಣಗೊಳಿಸಲಾಗುವುದು ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಯಾವುದೇ ಕಛೇರಿಯ ಕೆಲಸ ಕಾರ್ಯಗಳನ್ನು ಪೂರ್ಣ ಕಂಪ್ಯೂಟರೀಕರಣ ಮಾಡಿರುವುದಿಲ್ಲ. ಆದರೂ ಬಹುತೇಕ ಎಲ್ಲಾ ಇಲಾಖೆಗಳಲ್ಲಿ ಕಂಪ್ಯೂಟರೀಕರಣ ಆರಂಭವಾಗಿದೆ. ಇಂತಹ ಇಲಾಖೆಗಳ ಪಟ್ಟಿ ಲಗತ್ತಿಸಿದೆ.

ಆ) ಕಂಪ್ಯೂಟರೀಕರಣ ಮಾಡಬಹುದಾದ ಕೆಲಸ ಕಾರ್ಯಗಳನ್ನು ಗುರುತಿಸಿ, ಅವುಗಳನ್ನು ಹಂತ ಹಂತವಾಗಿ ಕಂಪ್ಯೂಟರೀಕರಣ ಮಾಡಲು ಕ್ರಮಕೈಗೊಳ್ಳಲಾಗಿದೆ. ಈ ದಿಸೆಯಲ್ಲಿ ಕಂಪ್ಯೂಟರೀಕರಣ ಮಾಡಲು ಅಗತ್ಯವಾದ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಪ್ಯಾಕೇಜ್‌ಗಳು ಹಾಗೂ ಇನ್ನಿತರ ಸಾಧನ ಸಲಕರಣೆಗಳನ್ನು ಖರೀದಿಸುವುದರ ಜೊತೆಗೆ ತಾಂತ್ರಿಕ ಸಿಬ್ಬಂದಿಯ ತರಬೇತಿ ಕೆಲಸವನ್ನೂ ಸಹ ಹಮ್ಮಿಕ್ಕೊಳ್ಳಲಾಗಿದೆ.

ಕಂಪ್ಯೂಟರೀಕರಣ ಆರಂಭಗೊಂಡಿರುವ ಇಲಾಖೆಗಳ ಪಟ್ಟಿ

1) ಅಬಕಾರಿ ಇಲಾಖೆ

2) ಅರಣ್ಯ ಇಲಾಖೆ

3) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

4) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

5) ಉದ್ಯೋಗ ಮತ್ತು ತರಬೇತಿ ಇಲಾಖೆ

6) ಕೃಷಿ ಇಲಾಖೆ

7) ಕಂದಾಯ ಇಲಾಖೆ

8) ಖಜಾನೆ ಇಲಾಖೆ

9) ಗಣಿ ಮತ್ತು ಭೂಗರ್ಭಶಾಸ್ತ್ರ ಇಲಾಖೆ

10) ಜನಾರೋಗ್ಯ ಇಲಾಖೆ

11) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ

12) ಪೋಲೀಸ್ ಇಲಾಖೆ

13) ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ

14) ಮೀನುಗಾರಿಕೆ ಇಲಾಖೆ

15) ಮುದ್ರಣ ಮತ್ತು ಪ್ರಕಟಣೆಗಳ ಇಲಾಖೆ

16) ಮೋಟಾರು ವಾಹನಗಳ ಇಲಾಖೆ

17) ತೋಟಗಾರಿಕೆ ಇಲಾಖೆ

18) ನೀರಾವರಿ ಇಲಾಖೆ

19) ರೇಷ್ಮೆ ಇಲಾಖೆ

20) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

21) ವಾಣಿಜ್ಯ ತೆರಿಗೆ ಇಲಾಖೆ

22) ವಾರ್ತಾ ಮತ್ತು ಪ್ರಚಾರ ಇಲಾಖೆ

23) ವಿಮಾ ಇಲಾಖೆ

24) ಶಿಕ್ಷಣ ಇಲಾಖೆ

25) ಸಹಕಾರ ಇಲಾಖೆ

26) ಲೋಕೋಪಯೋಗಿ ಇಲಾಖೆ.

ಬೆಂಗಳೂರು ನಗರದಲ್ಲಿ ರಸ್ತೆ ದಾಟಲು ವಿಶೇಷ ಕ್ರಮ ಕೈಗೊಳ್ಳುವ ಬಗ್ಗೆ.

481 - ಶ್ರೀ ಟಿ.ಬಿ. ಜಯಚಂದ್ರ (ಕೆಳ್ಳಂಬೆಳ್ಳ) : ಮಾನ್ಯ ಸಾರಿಗೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ರಸ್ತೆ ದಾಟಲು ಪಾದಚಾರಿಗಳಿಗೆ ತೊಂದರೆಯಾಗುತ್ತಿರುವ ರಸ್ತೆಗಳಷ್ಟು (ಪಟ್ಟಿ ನೀಡುವುದು)?

ಆ) ಈ ರಸ್ತೆಗಳನ್ನು ದಾಟಲು ಅನುವಾಗುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಹಾಗೂ ಎಲ್ಲಾ ರಸ್ತೆಗಳಲ್ಲಿ ಸುವ್ಯವಸ್ಥೆ ಮಾಡಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬೆಂಗಳೂರು ನಗರದ ಮೆಜೆಸ್ಟಿಕ್ ಪ್ರದೇಶ ಜಯನಗರ ಶಾಪಿಂಗ್ ಪ್ರದೇಶ, ಕಲಾಸಿಪಾಳ್ಯ, ಮಲ್ಲೇಶ್ವರ, ಶಿವಾಜಿನಗರ, ಎಂ.ಜಿ.ರೋಡ್, ಜೆ.ಸಿ.ರಸ್ತೆ, ಯಶವಂತಪುರ ಇತ್ಯಾದಿ ಜಾಗಗಳಲ್ಲಿ ಮುಖ್ಯವಾಗಿ ಮತ್ತು ಬೆಂಗಳೂರು ನಗರದ ಇತರೆ ಬೇರೆ ಕಡೆಗಳಲ್ಲಿಯೂ ಪಾದಚಾರಿಗಳಿಗೆ ರಸ್ತೆಗಳನ್ನು ದಾಟಲು ತೊಂದರೆಯಾಗುತ್ತಿದೆ. ಆದುದರಿಂದ ನಿರ್ದಿಷ್ಟವಾದ ಸ್ಥಳಗಳ ಪಟ್ಟಿಯನ್ನು ನೀಡುವುದು ಕಷ್ಟ.

ಆ) ಪಾದಚಾರಿಗಳು ರಸ್ತೆ ದಾಟುವ ಸ್ಥಳ ಎಂದು ಸೂಚಿಸಲು ಝೀಬ್ರಾ ಕ್ರಾಸಿಂಗ್ ಬಣ್ಣ ಬಳಿಯಲಾಗಿದೆ.

2) ಪಾದಚಾರಿಗಳು ರಸ್ತೆ ದಾಟುವ ಸ್ಥಳ ಎಂಬ ಸೂಚನಾ ಫಲಕಗಳನ್ನು ಹಾಕಲಾಗಿದೆ.

3) ರಸ್ತೆ ಸಂಚಾರ ಸಂಕೇತ ಅಳವಡಿಸಿದ ವೃತ್ತಗಳು ಮತ್ತು ಜಂಕ್ಷನ್‌ಗಳಲ್ಲಿ ಪಾದಚಾರಿಗಳಿಗೆ ರಸ್ತೆ ದಾಟಲು ಪ್ರತ್ಯೇಕವಾಗಿ ಸಮಯವನ್ನೇ ನೀಡಿ ಅನುಕೂಲ ಮಾಡಿಕೊಡಲಾಗಿದೆ.

4) 25 ನಿರ್ದಿಷ್ಟ ಸ್ಥಳಗಳಲ್ಲಿ ಮೇಲು ಸೇತುವೆ ಹಾಗೂ ಪಾದಚಾರಿಗಳ ಅಂತರಗತ ಸುರಂಗ ಮಾರ್ಗಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಸದ್ಯಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯವರು ಕೆಂಪೇಗೌಡ